**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

***ಎಸ್.ಸಿ.* 116/2020**

| | | |
|---|---|---|
| ಸಾಕ್ಷಿದಾರರ ಹೆಸರು | ಃ **ಲಕ್ಷ್ಮಿ** | *ಪ್ರಮಾಣ ಮಾಡಿದ ದಿನಾಂಕಃ* |
| ಗಂಡನ ಹೆಸರು | ಃ **ದೀಪು** | **14.02.2023** |
| ವಯಸ್ಸು | ಃ **35** ವರ್ಷ | |
| ವೃತ್ತಿ | ಃ **ಖಾಸಗಿ ಕೆಲಸ** | **ಪಿಡಬ್ಲ್ಯೂ ಃ 10** |
| ವಾಸ ಸ್ಥಳ | ಃ **ಮೈಸೂರು** | **ಸಿಡಬ್ಲ್ಯೂ ಃ 07** |

***ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ***

**ಮೃತ ಚಿನ್ನಸ್ವಾಮಿ ನನ್ನ ತಮ್ಮ. ನನಗೆ ಈ ಪ್ರಕರಣದ ಆರೋಪಿಗಳ ಪರಿಚಯ ಇಲ್ಲ. ದಿನಾಂಕ 11.02.2019ರಂದು ನನ್ನ ತಮ್ಮನನ್ನು ನಜರಾಬಾದ್ ಹತ್ತಿರ ಇರುವ ಪಾಳ್ಯ ಸ್ಮಶಾನದ ಹತ್ತಿನ ಕೊಲೆ ಮಾಡಿದ್ದರು. ನನ್ನ ತಮ್ಮನ ಶವವು ಗೋಪಾಲಗೌಡ ಆಸ್ಪತ್ರೆಯಲ್ಲಿ ಇದ್ದದ್ದು ಗೊತ್ತಾಗಿ ಅದೇ ದಿನ ಹೋಗಿ ನೋಡಲಾಗಿ, ನನ್ನ ತಮ್ಮ ಮೃತ ಪಟ್ಟಿದ್ದನು. ಆದರೆ ನನ್ನ ತಮ್ಮನನ್ನು ಯಾರು ಕೊಲೆ ಮಾಡಿದ್ದರು ಅಂತ ನನಗೆ ಗೊತ್ತಿಲ್ಲ. ಈವರೆಗೂ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.**

***(ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೇಳುತ್ತಾರೆ. ಸಾಕ್ಷಿಯು ಪೋಲೀಸರ ಎದುರಿನ ಹೇಳಿಕೆಯ ಪ್ರತಿಕೂಲವಾಗಿ ನುಡಿಯುತ್ತಿರುವುದರಿಂದ ಅನುಮತಿ ನೀಡಲಾಯಿತು.)***

***ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-***

**2. ನನ್ನ ತಮ್ಮನ ಶವ ಮಹಜರನ್ನು ಆಸ್ಪತ್ರೆಯಲ್ಲಿ ಪೊಲೀಸರು ಮಾಡಿದಾಗ ನಾನು ಹಾಜರಿದ್ದೆನು ಎಂದರೆ ನಿಜ. ನನಗೆ ಚಾಸಾ-1 ಮತ್ತು 14ರವರು ಗೊತ್ತಿಲ್ಲ. ಚಾಸಾ-1 ಮತ್ತು 14ರವರು ಆರೋಪಿಗಳೆಲ್ಲರೂ ನನ್ನ ತಮ್ಮನನ್ನು ಚಾಕು ಹಾಕಿ ಕೊಲೆ ಮಾಡಿದ್ದರು ಎಂದು ಗೊತ್ತಾಯಿತು ಎಂದರೆ ಗೊತ್ತಿಲ್ಲ. ಚಾಸಾ-1 ಮತ್ತು 14ರವರು ನನ್ನ ತಮ್ಮನನ್ನು ಗೋಪಾಲಗೌಡ ಆಸ್ಪತ್ರೆಗೆ ದಾಖಲು ಮಾಡಿದ್ದರು ಎಂದರೆ ಗೊತ್ತಿದೆ. ಆರೋಪಿಗಳೆ ನನ್ನ ತಮ್ಮನನ್ನು ಕೊಲೆ**

**ಮಾಡಿದ್ದಾರೆ ಎಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ಓದಿ ಹೇಳಿದಂತೆ “ದಿನಾಂಕ 11.02.2019ರಂದು ರಾತ್ರಿ 10:15 ಗಂಟೆಗೆ .......... ಪ್ಲಾಸ್ಟಿಕ ಪೈಪನಿಂದ ಹೊಡೆದು ಚುಚ್ಚಿದ್ದು ಅಂತ ಹೇಳಿಕೆಯನ್ನು ನಿಪಿ-6(ಸಿ) ರಂತೆ ಮತ್ತು “ನನ್ನ ತಮ್ಮನನ್ನು ಕ್ಷುಲ್ಲಕ ಕಾರಣಕ್ಕಾಗಿ ............ ತಿಳಿಯಬೇಕೆಂದು ಕೋರುತ್ತೇನೆ” ಅಂತ ನಿಪಿ-6(ಡಿ) ಪ್ರಕಾರ ಹೇಳಿಕೆಗಳನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗಳ ಜೊತೆ ಮಾಡಿಕೊಂಡಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.**

**ಪಾಟೀ ಸವಾಲು : ಆರೋಪಿಗಳ ಪರ ವಕೀಲರಿಂದಃ- ಇಲ್ಲ**

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

**ಓ ಹೇ ಕೇ ಸ ಇ ಎ ಒ.,**

**14.02.2023.**

[ ಜಿ.ಎಸ್. ಸಂಗ್ರೇಶಿ ]
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.